ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 23-04-1993.

# *ನಿಶ್ಚಯಬುದ್ಧಿ ಭವ, ಅಮರ ಭವ*

(निश्चयबुद्धि भव, अमर भव)

**ನಿರಾಕಾರನು, ಸರ್ವಶಕ್ತಿವಂತನೂ ಆದ  ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸಿಲ್ವರ್ ಜೂಬ್ಲಿಗೆ ಬಂದಿರುವಂತಹ ಹಳೆಯ ಅಣ್ಣಂದಿರು, ಅಕ್ಕಂದಿರ ಸ್ನೇಹದ ಆಹ್ವಾನದ ಪ್ರತಿ ಅವ್ಯಕ್ತ ಬಾಪ್‌ದಾದಾ ಮಕ್ಕಳ ಸಭೆಯಲ್ಲಿ ಬಂದರು ಮತ್ತು ಮಧುರ ದೃಷ್ಟಿ ಕೊಡುತ್ತಾ ಹೇಳಿದರು.**

ಇಂದು ಬಾಪ್‌ದಾದಾ  ಸರ್ವ ಅತೀ ಸ್ನೇಹಿ, ಆದಿಯಿಂದ ಯಜ್ಞ ಸ್ಥಾಪನೆಯ ಸಹಯೋಗಿ, ಅನೇಕ ಪ್ರಕಾರದ ಬಂದಿರುವಂತಹ ಅನ್ಯ ಅನ್ಯ ಸಮಸ್ಯೆಗಳ ಪೇಪರ್ನನಲ್ಲಿ ನಿಶ್ಚಯಬುದ್ಧಿ ವಿಜಯಿಗಳಾಗಿ ಪಾರು ಮಡುವಂತಹ ಆದಿ ಸ್ನೇಹಿ, ಸಹಯೋಗಿ, ಸ್ಥಿರ, ಅಚಲ ಅತ್ಮರೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ನಿಶ್ಚಯದ ಸಬ್ಜೆಕ್ಟ್ ನಲ್ಲಿ ಪಾಸಾಗಿ ನಡೆಯುವಂತಹ ಮಕ್ಕಳ ಹತ್ತಿರ ಬಂದಿದ್ದಾರೆ. ಈ ನಿಶ್ಚಯ ಈ ಹಳೆಯ ಜೀವನದಲ್ಲಿರಬಹುದು. ಮುಂದಿನ ಜೀವನದಲ್ಲಿಯೂ ಸದಾ ವಿಜಯದ ಅನುಭವ ಮಾಡಿಸುತ್ತಿರುತ್ತದೆ. ನಿಶ್ಚಯ, ಅಮರಭವ! ದ ವರದಾನ ಸದಾ

ಜೊತೆಯಿರಲಿ, ವಿಶೇಷ ಇಂದು ಬಹುಕಾಲದ ಅನುಭವಿ ವೃದ್ಧ ಆತ್ಮರಿದ್ದಾರೆ. ಅವರ ಸ್ಮೃತಿ ಮತ್ತು ಸ್ನೇಹದ ಬಂಧನದಲ್ಲಿ ಬಂಧಿತರಾಗಿ ತಂದೆಯು ಬಂದಿದ್ದಾರೆ. ನಿಶ್ಚಯದ ಶುಭಾಷಯಗಳು.

ಒಂದು ಕಡೆ ಯಜ್ಞ ಅರ್ಥಾತ್ ಪಾಂಡವರ ಕೋಟೆಯ ಅಡಿಪಾಯ (ಫೌಂಡೇಷನ್) ಆತ್ಮರಿದ್ದಾರೆ ಅವರು ಮುಂದಿದ್ದಾರೆ ಮತ್ತು ಇನ್ನೊಂದು ಕಡೆ ನೀವು ಅನುಭವಿ ಆದಿ ಆತ್ಮರು ಈ ಪಾಂಡವರ ಕೋಟೆಯ ಗೋಡೆಯ ಮೊದಲ ಇಟ್ಟಿಗೆಯಾಗಿದ್ದೀರಿ. ಫೌಂಡೇಷನ್ ಮುಂದೆ ಇದೆ ಮತ್ತು ಅದಿಯ ಇಟ್ಟಿಗೆಯ  ಆಧಾರದ ಮೇಲೆ ಈ ಕೋಟೆಯು ಸಮರ್ಥವಾಗಿ ಇಡೀ ವಿಶ್ವದ ಛತ್ರಛಾಯೆಯಾಗಿದೆ. ಅದೂ ಮುಂದಿದೆ. ಹೇಗೆ ತಂದೆಯು ಮಕ್ಕಳ ಸ್ನೇಹದಲ್ಲಿ "ಹಾಂ! ಮಾಲಕ, ಪ್ರತ್ಯಕ್ಷ ಮಾಡಿ ತೋರಿಸಿದರೋ ಆದೇ ರೀತಿ ಸದಾ ಬಾಪ್‌ದಾದಾ ಮತ್ತು ನಿಮಿತ್ತ ಅತ್ಮರ ಶ್ರೀಮತ ಅಥವಾ ಡೈರೆಕ್ಶನನ್ನು ಸದಾ "ಹಾಂ ಎಂದು ಪ್ರತ್ಯಕ್ಷ" ಮಾಡುತ್ತೀರಿ. ಎಂದೂ ವ್ಯರ್ಥ ಮನ್ಮತ ಅಥವಾ ಪರಮತವನ್ನು ಸೇರಿಸಬೇಡಿ. ಮಾಲೀಕನ ಪ್ರತ್ಯಕ್ಷತೆಯನ್ನು ತಿಳಿದು ಶ್ರೀಮತದಂತೆ ಹಾರುತ್ತ ನಡೆಯಿರಿ. ತಿಳಿಯಿತೇ? ಒಳ್ಳೆಯದು.

ರಿವೈಸ್ ಕೋರ್ಸ್ 23-04-1993.

***ನಿಶ್ಚಯಬುದ್ಧಿ ಭವ ಅಮರ ಭವ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮನನ್ನ ತಂದೆ.

1. ನಾನು ನಿಶ್ಚಯ ಬುದ್ಧಿ ವಿಜಯೀ ಸ್ವರೂಪ.

2. ನಿಶ್ಚಯ ಬುದ್ಧಿ ನನ್ನ ಜೀವನದಲ್ಲಿ ಸದಾ ವಿಜಯದ ಅನುಭವವನ್ನು ಮಾಡಿಸುತ್ತಿದೆ.

3. ಹೇಗೆ ತಂದೆಯು ಮಕ್ಕಳ ಸ್ನೇಹದಲ್ಲಿ ಹಾಗೆಯೇ ಎಂದು ಪ್ರತ್ಯಕ್ಷ ಮಾಡಿ ತೋರಿಸಿದರೋ ಹಾಗೆಯೇ ನಾನು ಕೂಡ ಬಾಪ್‌ದಾದಾ ಮತ್ತು ನಿಮಿತ್ತಾತ್ಮರ ಶ್ರೀಮತ ಅಥವಾ ಡೈರೆಕ್ಷನ್ ಅನ್ನು ಸದಾ ಹಾಗೆಯೇ ಎಂದು ಪ್ರತ್ಯಕ್ಷ ಮಾಡುತ್ತೇನೆ.

4. ನಾನು ಮನ್ಮತ(ಮನಸ್ಸು ಹೇಳುವ ಮತ), ಪರಮತ(ಪರರು ಹೇಳುವ ಮತ)ವನ್ನು ಸೇರಿಸದೇ ಸದಾ ತಂದೆಯ ಶ್ರೀಮತದಂತೆ ಹಾರುತ್ತಾ ನಡೆಯುತ್ತಿದ್ದೇನೆ.